ಇಂಥಹ ಸಂಭ್ರಮವನ್ನೆಲ್ಲಾ ಸುಮಾರು 25 – 30 ವರ್ಷಗಳ ಹಿಂದೆ ಕಾಣಬಹುದಿತ್ತು. ಆದರೆ ಇಂದಿನ ಹೆಣ್ಮಕ್ಕಳು ಮುಡಿಯುವುದಾದರೆ ಮಲ್ಲಿಗೆ ಮಾತ್ರ. ಅದೂ ಯಾವುದಾದರೂ ಹಬ್ಬ, ಮದುವೆ–ಮುಂಜಿಯಂತಹ ಸಮಾರಂಭಗಳಲ್ಲಿ ಮಾತ್ರ. ಅವರ ಜಡೆಗಿಂತ ಹೂಮಾಲೆಯೇ ಉದ್ದವಾಗಿದ್ದು ಎಡಬಲ ಹೆಗಲ ಮೇಲಿಂದ ಇಳಿಬಿಟ್ಟಿರುತ್ತಾರೆ. ಹೆಚ್ಚಾಗಿ ಮನೆಯ ಅಲಂಕಾರಕ್ಕೋ, ವ್ಯಾಲಂಟೇನ್ಸ್ ಡೇಗೋ ಬಳಸುವ ಗುಲಾಬಿಗೆ ಎಲ್ಲೋ ಅಪರೂಪಕ್ಕೊಮ್ಮೆ ಮುಡಿಯೇರುವ ಈ ಭಾಗ್ಯ. ಉಳಿದ ಹೂಗಳೆಲ್ಲಾ ದೇವರಿಗೋ, ಬಾಗಿಲ ತೋರಣಕ್ಕೋ ತೂಗು ಹಾಕಿಸಿಕೊಳ್ಳುತ್ತವೆ. ಜಡೆ ಇದ್ದರೆ ಹೂವು ಮುಡಿಗೇರುತ್ತದೆ. ಆದರೆ ಇಂದಿನ ಹೆಣ್ಮಕ್ಕಳ ಹಾರಾಡುವ ಕೂದಲಿಗೆ, ಆಧುನಿಕ ವಸ್ತ್ರಕ್ಕೆ ಹೂದಂಡೆ ಅಷ್ಟೇನೂ ಹೊಂದುವುದಿಲ್ಲ ಬಿಡಿ.

ಮದುವೆಯ ಹಿಂದಿನ ದಿನ ಹೂವೀಳ್ಯದ ಶಾಸ್ತ್ರ, ಬಸಿರು ಹೆಣ್ಣಿಗೆ ಸೀಮಂತದ ದಿನ ಹೂ ಮುಡಿಸುವ ಶಾಸ್ತ್ರ ಬಿಟ್ಟರೆ ಹೆಣ್ಮಕ್ಕಳು ದಿನನಿತ್ಯ ಹೂವು ಮುಡಿಯುವುದನ್ನು ಕಾಣುವುದೇ ಅಪರೂಪವಾಗಿದೆ. ಈಗೀಗ ಹಳ್ಳಿಯ ಹೆಣ್ಮಕ್ಕಳೂ ಹೂವನ್ನು ಮುಡಿಯುವುದನ್ನು ಕಾಣುವುದು ಅಪರೂಪ. ಅವರೂ ಪಟ್ಟಣದ ಆಧುನಿಕತೆಯ ಜೀವನಕ್ಕೆ ತಕ್ಕಂತೆ ಅಲಂಕರಿಸಿಕೊಳ್ಳುವುದನ್ನು ಕಲಿತಿದ್ದಾರೆ. ಮನೆಗಳಲ್ಲಿ ಹೂ ಕಟ್ಟುವ ಹೆಣ್ಮಕ್ಕಳೂ ಅಪರೂಪವಾಗಿದ್ದಾರೆ. ಹೂ ಮಾರುವ ಹೆಂಗಸರ ಮನೆಗಳಲ್ಲಿ ಮಾತ್ರ ಈ ದೃಶ್ಯ ಕಾಣಬಹುದೇನೋ! ಇಂತಹ ಎಷ್ಟೋ ಸಂಭ್ರಮಿಸುವ ಸಂಗತಿಗಳು ನಿಧಾನವಾಗಿ ನೇಪಥ್ಯಕ್ಕೆ ಸರಿಯುತ್ತಿವೆ. ಸಮಯದ ಅಭಾವ, ಅಲರ್ಜಿ, ಹೂವು ತಲೆಗೆ ಭಾರ, ಅಯ್ಯೋ ಅದನ್ಯಾರು ಮುಡೀತಾರೆ ಎಂಬ ಅನಾಸಕ್ತಿ ಇತ್ಯಾದಿ ಕಾರಣಗಳು ಅವರ ಮುಂದಿವೆ. ಅಲ್ಲದೆ ಇಂದಿನ ಹೆಣ್ಮಕ್ಕಳಿಗೆ ಸಂಭ್ರಮಿಸಲು ಬೇಕಾದಷ್ಟು ಆಧುನಿಕ ಸಂಗತಿಗಳೂ ದೊರೆಯುತ್ತಿವೆಯಷ್ಟೇ? ಅವುಗಳ ಮುಂದೆ ಯಃಕಶ್ಚಿತ್ ಎನಿಸುವ ಈ ಹೂ ಕಟ್ಟಿ ಮುಡಿಯುವ ಸಂಭ್ರಮ ಬರೀ ಸಪ್ಪೆ, ಸಪ್ಪೆ. ನೀವೇನಂತೀರಾ?

**ಅರುಣಾ ಕೆ.ಆರ್.**

ತುಂಗಾನದಿ ತೀರದ ಶೃಂಗೇರಿಯವರಾದ ಅರುಣಾ ಈಗ ನೆಲೆಸಿರುವುದು ಬೆಂಗಳೂರಿನಲ್ಲಿ. ಬಿ.ಎಸ್ಸಿ ಪದವಿ ಬಳಿಕ ಕಂಪ್ಯೂಟರ್ ಡಿಪ್ಲೊಮಾ ಮಾಡಿ ಖಾಸಗಿ ಕಂಪನಿಯೊಂದರಲ್ಲಿ ಸಹಾಯಕ ಪ್ರೋಗ್ರಾಮರ್ ಆಗಿ ಕೆಲಸ ಮಾಡಿದ ಅನುಭವವಿದೆ. ಕನ್ನಡ ಸಾಹಿತ್ಯ ಪರಿಷತ್ತು ನಡೆಸುವ ಕಾವ ಪರೀಕ್ಷೆಯಲ್ಲಿ ಮೊದಲ ರ್‍ಯಾಂಕ್ ಪಡೆದಿದ್ದಾರೆ. ಕರ್ನಾಟಕ ಮುಕ್ತವಿಶ್ವವಿದ್ಯಾಲಯದಿಂದ ಕನ್ನಡ ಎಂ.ಎ. ಪದವಿ ಗಳಿಸಿಕೊಂಡಿದ್ದಾರೆ.